# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ: ಶೈವಿ: 2019-20 : 3577 ದಿನಾಂಕ: 12.12.2019

## ಸುತ್ತೋಲೆ

**ವಿಷಯ:-ಕೇಂದ್ರೀಯ ಮೀಸಲಾತಿ ಪೋಲಿಸ್ ಪಡೆಯಲ್ಲಿ ಸೇವೆಯಲ್ಲಿರುವ/ಮೃತರಾದ ಯೋಧರ ಮಕ್ಕಳಿಗೆ ನೀಡುತ್ತಿರುವ ಸವಲತ್ತುಗಳ ಮಾಹಿತಿಯನ್ನು ಒದಗಿಸುವ ಕುರಿತು.**

**ಉಲ್ಲೇಖ:**1) ಸರ್ಕಾರದ ಪತ್ರದ ಸಂಖ್ಯೆ: ಕ್ರಮಾಂಕ:ಇಡಿ299 ಯುಆರ್‌ಸಿ2017 ದಿನಾಂಕ:25.07.2017

2) ಈ ಕಛೇರಿ ಪತ್ರದ ಸಂಖ್ಯೆ;ತುವಿ;ಶೈವಿ:2017-18:2109 ದಿನಾಂಕ:01.09.2019

3) ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಇವರ ಪತ್ರ ಸಂಖ್ಯೆ: ಕರಾಕಾವಿ/ಕುಸ/ವಿಮ/ಪ್ರವೇಶಾತಿ/2019-20/1635 ದಿನಾಂಕ: 22.11.2019

4) ಮಾನ್ಯ ಕುಲಪತಿಯವರ ಅನುಮೋದನೆ (ಕಂಡಿಕೆ-174) ದಿನಾಂಕ:11.12.2019

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಹುತಾತ್ಮ ಸೈನಿಕರ ಗೌರವಾರ್ಥವಾಗಿ ಹುತಾತ್ಮ ಸೈನಿಕರ ಹೆಣ್ಣು ಮಕ್ಕಳ ಉಚಿತ ಶಿಕ್ಷಣ, ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸುವ ಕುರಿತು ಉಲ್ಲೇಖ (2) ರ ಪತ್ರದಲ್ಲಿ ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳಿಗೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಪ್ರಸ್ತುತ ಉಲ್ಲೇಖ (3) ರ ಪತ್ರದಲ್ಲಿ ಕೇಂದ್ರೀಯ ಮೀಸಲಾತಿ ಪೋಲಿಸ್ ಪಡೆಯಲ್ಲಿ ಸೇವೆಯಲ್ಲಿರುವ/ ಮೃತರಾದ ಯೋಧರ ಮಕ್ಕಳಿಗೆ ತಮ್ಮ ವಿಶ್ವವಿದ್ಯಾನಿಲಯದಲ್ಲಿ ನೀಡುತ್ತಿರುವ ಮೀಸಲಾತಿ ಹಾಗೂ ಇತರೆ ಸವಲತ್ತುಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವಂತೆ ವಿಶ್ವವಿದ್ಯಾನಿಲಯವನ್ನು ಕೋರಿರುತ್ತಾರೆ

ಈ ಸಂಬಂಧ, ಉಲ್ಲೇಖ (2)ರ ಕಛೇರಿ ಪತ್ರದಲ್ಲಿ ತಿಳಿಸಿರುವಂತೆ ಹುತಾತ್ಮ ಸೈನಿಕರ ಗೌರವಾರ್ಥವಾಗಿ ಹುತಾತ್ಮ ಸೈನಿಕರ ಹೆಣ್ಣು ಮಕ್ಕಳ ಉಚಿತ ಶಿಕ್ಷಣ, ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಿರುವ ಕುರಿತು ಮತ್ತು ಕೇಂದ್ರೀಯ ಮೀಸಲಾತಿ ಪೋಲಿಸ್ ಪಡೆಯಲ್ಲಿ ಸೇವೆಯಲ್ಲಿರುವ/ಮೃತರಾದ ಯೋಧರ ಮಕ್ಕಳಿಗೆ ನೀಡುತ್ತಿರುವ ಮೀಸಲಾತಿ ಹಾಗೂ ಇತರೆ ಸವಲತ್ತುಗಳನ್ನು (ತಮ್ಮ ಕಾಲೇಜುಗಳಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ವಿದಾರ್ಥಿಗಳಿದ್ದಲ್ಲಿ) ಅವರಿಗೆ ನೀಡುತ್ತಿರುವ ಮೀಸಲಾತಿ ಹಾಗೂ ಇತರೆ ಸವಲತ್ತುಗಳ ಸಂಪೂರ್ಣ ಮಾಹಿತಿಯನ್ನು ಈ ಪತ್ರ ತಲುಪಿದ 05 ದಿನಗಳೊಳಗಾಗಿ ಮಾಹಿತಿಯನ್ನು ಕುಲಸಚಿವರು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು ಇವರಿಗೆ ಕಳುಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

12/12

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

ಗೆ,

1) **ಪ್ರಾಂಶುಪಾಲರು ಎಲ್ಲಾ ಘಟಕ ಹಾಗೂ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
2) **ಮುಖ್ಯಸ್ಥರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಪ್ರತಿಗಳು:

1) ಮಾನ್ಯ ಕುಲಪತಿಯವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಸಿಸ್ಟಮ್ ಅನಾಲಿಸ್ಟ್, ವಿಶ್ವವಿದ್ಯಾನಿಲಯತುಮಕೂರು - ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ಇ-ಮೇಲ್ ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3) ಕಚೇರಿ ಪ್ರತಿ